# ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ

**ಸಿ.ಸಿ.ನಂ: 1029/2016**

**ಸಿ ಡಬ್ಲ್ಯೂಃ 3, ಪಿ ಡಬ್ಲ್ಯೂಃ 1**

**ಸಾಕ್ಷಿದಾರರ ಹೆಸರು** ಃ ಸುಲೇಮನ್
ತಂದೆ **ಹೆಸರು** ಃ ಸತ್ತರ ಸಾಬ್
**ವಯಸ್ಸು** ಃ **43 ವರ್ಷ**
**ವೃತ್ತಿ** ಃ ಭತ್ತದ ವ್ಯಾಪಾರ
**ವಾಸ** ಃ ಸಿರುಗುಪ್ಪ ಟೌನ್

**ಪ್ರಮಾಣ ಮಾಡಿದ ದಿನಾಂಕಃ 28.02.2023.**

**ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.**

ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿಃ **1** ಎಂದು ಸಾಕ್ಷಿಯ ಸಹಿಯನ್ನು ನಿಪಿಃ **1** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು **5-6** ವರ್ಷ ಗಳ ಹಿಂದೆ ಸಿರುಗುಪ್ಪ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಯಾವ ವಿಚಾರಕ್ಕೆ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ.

**೨. ಈ ಹಂತದಲ್ಲಿ ಸಸಅ ರವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು ಕೋರಿಕೆಯ ಮೇರೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.**

## ಪಾಟೀ ಸವಾಲುಃ ಶ್ರೀ ಎ ಪಿ ಪಿ ರವರಿಂದ

ದಿನಾಂಕ **07-05-2016** ರಂದು ಬೆಳಿಗ್ಗೆ **07-30** ಗಂಟೆಯಿದ **09-00** ಗಂಟೆಗೆಯವರೆಗೆ ಸಿರುಗುಪ್ಪ ಪಟ್ಟಣದ ಮಂಜುನಾಥ ಟಾಕೀಸ್ ಹತ್ತಿರ ಇರುವ ವಿಜಯನಗರ ಕಾಲುವೆಯ ಹತ್ತಿರ ನಿಪಿಃ **1** ರಂತೆ ಪಂಚನಾಮೆ ಮಾಡಿ ಸ್ಥಳದಿಂದ **1000** ರೂಪಾಯಿಗೆ ಸಮವಾಗುವ ಬಿಳಿ ಪೇಪರ್ ಗಳನ್ನು ಕಟ್ ಮಾಡಿ ಅದರ ಸುತ್ತಲು **1000** ರೂ ನೋಟಿಗೆ ಹೊಂದಿಕೊಳ್ಳುವಂತೆ ಬಣ್ಣವನ್ನು ಹಚ್ಚಿದ ಸುಮಾರು **8** ಕಟ್ ಗಳು**,** ಒಂದು ಬಿಳಿ ಹಾಳೆ ಬಂಡಲ್**,** ಸ್ವಿಟ್ ಮಾರ್ಕರ್ ಸಾಬುನಿನಂತೆ ಇರುವ ಚಿಕ್ಕ ಕೇಕ್ ಗಳ ಒಂದು ರಟ್ಟಿನ

ಬಾಕ್ಸ್, ಬಂಗಾರವೆಂದು ಮೋಸ ಮಾಡಲು ತಂದ ಲೋಹದ ಚಿಕ್ಕ ಚಿಕ್ಕ ತೊಗರಿ ಬೇಳೆ ಆಕಾರದ ಸುಮಾರು **200** ತುಂಡುಗಳು, ಪೇಪರ್ ಗೆ ಬಣ್ಣ ಹಚ್ಚಲು ಉಪಯೋಗಿಸಿರುವ ಒಂದು ಚಿಕ್ಕ ಬ್ರೆಷ್, ನೋಟಿನಂತೆ ಕಾಣುವ ಪೇಪರ್ ಗಳನ್ನು ಪ್ಯಾಕ್ ಮಾಡಲು **2** ಪ್ಲಾಸ್ಟಿಕ್ ರೋಲ್ ಗಳುಮತ್ತು ಬಿಳಿ ಬಣ್ಣದ ಇಂಡಿಕಾ ಕಾರ್ ಸಂಖ್ಯೆ ಕೆಎ**–35–**ಎನ್**–3659** ಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ **1** ರಂತೆ ನನ್ನ ಸಮಕ್ಷಮ  ಪಂಚನಾಮೆ ಮಾಡಿ ಸದರಿ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರು ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ.